


International Journal of Kannada Research
www.kannadajournal.com

**ISSN: 2454–5813**
IJKR 2021; 7(2): 12-16
© 2021 IJKR
www.kannadajournal.com
Received: 07-02-2021
Accepted: 09-03-2021

**ಡಾ. ಸುರೇಶ ಕೆ ಸಿ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಕೆ.ಎಲ್.ಇ.ಸಂಸ್ಥೆಯ
ಎಸ್. ನಿಜಲಿಂಗಪ್ಪ ಕಾಲೇಜು,
ರಾಜಾಜಿನಗರ ೨ನೇ ಹಂತ,ಬೆಂಗಳೂರು

**Corresponding Author:**
**ಡಾ. ಸುರೇಶ ಕೆ ಸಿ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಕೆ.ಎಲ್.ಇ.ಸಂಸ್ಥೆಯ
ಎಸ್. ನಿಜಲಿಂಗಪ್ಪ ಕಾಲೇಜು,
ರಾಜಾಜಿನಗರ ೨ನೇ ಹಂತ,ಬೆಂಗಳೂರು

# ಪೊನ್ನನ ಶಾಂತಿ ಪುರಾಣ: ಕಾವ್ಯ ಮತ್ತು ಧರ್ಮ

**ಡಾ. ಸುರೇಶ ಕೆ ಸಿ**

ಶಾಂತಿಪುರಾಣವು ಕನ್ನಡ ರತ್ನತ್ರಯರಲ್ಲಿ ಒಬ್ಬನಾದ ಪೊನ್ನನು ರಚಿಸಿರುವ ಕೃತಿ. ಇವನು ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲಿಯೂ ಪಾಂಡಿತ್ಯವನ್ನು ಪಡೆದ ಉಭಯ ಭಾಷಾ ವಿಶಾರದನಾಗಿದ್ದಾನೆ. ಈತನಿಗೆ ಪೊನ್ನ, ಪೊನ್ನಿಗ, ಪೊನ್ನಮಾರ್ಯ, ಸವಣ, ಕರುಳ್ಗಳಸವಣ, ಕವಿಚಕ್ರವರ್ತಿ, ಉಭಯಕವಿ ಚಕ್ರವರ್ತಿ, ಸರ್ವದೇವಕವೀಂದ್ರ, ಸೌಜನ್ಯ ಕಂದಾಂಕುರ, ಪಾಪೇಭ ಕಂಠೀರವ ಎಂಬ ಹೆಸರುಗಳೂ, ಬಿರುದುಗಳೂ ಇವೆ. ನಮಗೆ ದೊರೆಕಿರುವ ಪೊನ್ನನ ಗ್ರಂಥಗಳೆಂದರೆ 'ಶಾಂತಿಪುರಾಣ' ಮತ್ತು 'ಜಿನಾಕ್ಷರ ಮಾಲೆ', "ಲೋಕೋತ್ತರ ಲೌಕಿಕ ಪರಿಣತಿ ಪುನ್ನಿಗಂಗೆ ಶಾಂತೀಶ್ವರ ರಾಮಕಥಾ ಪ್ರಶಸ್ತಿಯಿಂದಾದ ಕೃತಿಗಳಿಂ" ಎಂಬ ಉಲ್ಲೇಖದಿಂದ ಪೊನ್ನನ ಧಾರ್ಮಿಕ ಕೃತಿ 'ಶಾಂತಿಪುರಾಣ' ಲೌಕಿಕ ಕೃತಿ ರಾಮಕಥೆಯನ್ನು ತಿಳಿಸುವ 'ಭುವನೈಕ್ಯ ರಾಮಾಭ್ಯುದಯ'.ಭುವನೈಕ್ಯ ರಾಮಾಭ್ಯುದಯ ಮತ್ತು 'ಗತ ಪ್ರತ್ಯಾಗತ' ಈ ಎರಡು ಕೃತಿಗಳು ಉಪಲಬ್ಧವಾಗಿಲ್ಲ.

ಶಾಂತಿಪುರಾಣವು ೧೬ನೇ ತೀರ್ಥಂಕನಾದ ಶಾಂತಿನಾಥನ ಚರಿತೆಯನ್ನು ಕುರಿತ ಜೈನ ಪುರಾಣ. ೧೨ ಆಶ್ವಾಸಗಳನ್ನು ಒಳಗೊಂಡ ಚಂಪೂ ಕಾವ್ಯ. ಪೊನ್ನನು ತನ್ನ ಗುರುವಾದ ಜಿನಚಂದ್ರದೇವರನ್ನೇ ಕಥಾ ನಾಯಕನಿಗೆ ಹೋಲಿಸಿ ಗ್ರಂಥ ಬರೆದಿರುವುದಾಗಿ ಹೇಳುತ್ತಾನೆ. "ಸಕಲಜ್ಞಂ ಕವಿಚಕ್ರವರ್ತಿ ಜಿನಚಂದ್ರೇಂದ್ರಂಗೆ ಸದ್ಭಕ್ತಿ ಪೂರ್ವಕದಿಂದಮ್ಮನ ಭಕ್ತನುಂ ತದನುಜಾತಂ ಪುನ್ನನುಂ ಪೇಳ್ವುದೆಂದು ಕರಂ ಪ್ರಾರ್ಥಿಸೆ ಶಾಂತಿನಾಥ ಕಥೆಯಂ" ಹೀಗೆ ಪೊನ್ನಮಯ್ಯನು ವಿಶೇಷವಾಗಿ ಪ್ರಾರ್ಥಿಸಿದ್ದರಿಂದ ಕೃತಿ ರಚನೆ ಮಾಡಿದನೆಂದು ಹೇಳುತ್ತಾನೆ.

ಶಾಂತಿನಾಥ ತೀರ್ಥಂಕರನ ೧೧ ಪೂರ್ವ ಜನ್ಮದ ಅಥವಾ ಭವಾವಳಿಯ ವಿಸ್ತಾರವಾದ ನಿರೂಪಣೆ ಇದರಲ್ಲಿದೆ. ಮೊದಲ ೯ ಆಶ್ವಾಸಗಳಲ್ಲಿ ಶ್ರೀಷೇಣ, ಭೋಗ ಭೂಮಿಜ, ಶ್ರೀದೇವ, ಅಮಿತತೇಜ, ಮಣಿಚೂಳ, ಅಪರಾಜಿತ, ಅಚ್ಯುತೇಂದ್ರ, ವಜ್ರಾಯುಧ, ಅಹಮಿಂದ್ರ, ಮೇಘರಥ, ಮಹೇಂದ್ರ ಎಂಬ ಹನ್ನೊಂದು ಜನ್ಮಗಳ ಕಥೆಯನ್ನು ಹೇಳಲಾಗಿದೆ. ಕೊನೆಯ ೩ ಆಶ್ವಾಸಗಳಲ್ಲಿ ಮಾತ್ರ ಶಾಂತಿನಾಥನ ಚರಿತ್ರೆ ನಿರೂಪಿಸಲ್ಪಟ್ಟಿದೆ. ಮುಖ್ಯ ಕಥಾನಾಯಕನಾದ ಶಾಂತಿನಾಥನಿಗೆ ಪ್ರಾಮುಖ್ಯತೆ ಕೊಟ್ಟಿಲ್ಲದಿರುವುದು ಕಲಾ ದೃಷ್ಟಿಯಿಂದ ಮತ್ತು ಪ್ರಮಾಣ ಜ್ಞಾನದ ದೃಷ್ಟಿಯಿಂದ ಸರಿಯಾಗಿ ತೋರದಿರುವುದಕ್ಕೆ ಕಾರಣ ಜೈನ ಪುರಾಣಗಳಲ್ಲಿ ಭವಾವಳಿಗಳಿಗಿರುವ ಪ್ರಾಮುಖ್ಯತೆಯನ್ನು ಕವಿ ಪೊನ್ನ ತೋರಿಸಿರುವುದರಿಂದಲೇ ಅವನಿಗೆ ಸವಣ ಎಂಬ ಮತ್ತೊಂದು ಹೆಸರು ಅನ್ವರ್ಥಕವಾಗಿದೆ.

ಕಾವ್ಯ: ಶಾಂತಿನಾಥನ ಕಥೆಗಿಂತಲೂ ಇಲ್ಲಿ ಭವಾವಳಿಯ ವಿಚಾರಕ್ಕೆ ಹೆಚ್ಚು ಆದ್ಯತೆ ಕೊಟ್ಟಿರುವುದರಿಂದ ಪೊನ್ನನ ಗ್ರಂಥದಲ್ಲಿ ಕಾವ್ಯಧರ್ಮಗಳು ಹೆಚ್ಚಾಗಿ ಹೊರಹೊಮ್ಮಲು ಅಡ್ಡಿಯಾಗಿರಬಹುದು. ಕಾವ್ಯಾಂಶಕ್ಕಿಂತಲೂ ಪುರಾಣಾಂಶವೇ ಹೆಚ್ಚಾಗಿರುವುದರಿಂದ ಪುರಾಣ ಚೂಡಾಮಣಿ ಎಂದು ಕರೆದಿರುವುದು ಹೆಚ್ಚು ಔಚಿತ್ಯಪೂರ್ಣವೆಂದೇ ಭಾವಿಸಿದರೂ ಪೊನ್ನನ ಕಾವ್ಯ ಶಕ್ತಿಯನ್ನು ಮತ್ತು ಕಾವ್ಯ ರಚನಾ ಕೌಶಲ್ಯದ ಪ್ರತಾಪವನ್ನು ನೋಡಬಹುದು.

ಕನ್ನಡಗವಿತೆಯೊಳಸಗಂ
ಗನ್ನೂರ್ಮಡಿ ರೇಖೆಗಗ್ಗಳಂ ಸಕ್ಕದದೊಳ್
ಮುನ್ನಳ್ಳ ಕಾಳಿದಾಸಂ
ಗನ್ನಾಲ್ವಡಿ ರಚನೆಯೊಳ್ ಕುರುಳ್ಗಳ ಸವಣಂ

ಕನ್ನಡ ಕಾವ್ಯ ರಚನೆಯಲ್ಲಿ ಅಸಗನಿಗಿಂತ ನೂರು ಪಾಲು, ಸಂಸ್ಕೃತದಲ್ಲಿ ಕಾಳಿದಾಸನಿಗಿಂತ ನಾಲ್ಕುಪಾಲು ಮೇಲು ಎಂದು ಹೇಳಿರುವುದನ್ನು ಗಮನಿಸಿದರೆ ಅವನ 'ಶಾಂತಿಪುರಾಣ' ಕೃತಿಯಾಗಲಿ ಅಥವಾ ಪೊನ್ನ ಕವಿಯು ಕಾಳಿದಾಸನ ಸಾಲಿನಲ್ಲಿ ನಿಲ್ಲಬಲ್ಲನೆ? ಎಂಬ ಜಿಜ್ಞಾಸೆ ಸಹೃದಯರ ಮನದಲ್ಲಿ ನಿಶ್ಚಿತವಾಗಿಯೂ ಮೂಡುವುದು. ಆದರೂ ಕೂಡ ಸಂಸ್ಕೃತ ಮತ್ತು ಕನ್ನಡದಲ್ಲಿ ಉಭಯ ಭಾಷಾವಿಶಾರದನಾದ ಪೊನ್ನನು ತನ್ನ ಕೃತಿಯಲ್ಲಿ ಧರ್ಮಕ್ಕೆ ಹೆಚ್ಚಿನ ಆದ್ಯತೆ ಕೊಟ್ಟರೂ ಕಾವ್ಯಾಂಶಗಳು ಇಲ್ಲವೇ ಇಲ್ಲ ಎಂದು ನಿರಾಕರಿಸಲು ಸಾಧ್ಯವಾಗದಂತೆ ಅಲ್ಲಲ್ಲಿ ಕಾವ್ಯ ಧರ್ಮಗಳನ್ನು ಮೂಡಿಸಿದ್ದಾನೆ.

ಮೆಯ್ವಸವ್ರೊಂದೆ ಪೂವಿನೊಳೆ ಪೋಗೆ ತೆರಂದಿರಿದಳ್ಳೆಗೊಂಬಿನೊಳ್
ಪಾಯ್ವುದುಂ ಒಂದೆ ಪಣ್ಣರಸಮಂ ಸವಿದಾರದೆ ಚಂಚುವಂ ಕೆಲ
ಕ್ಕುಯ್ವುದುಂ ಒಂದೆ ಕೋರಕದೊಳಳ್ಕಮೆವೆತ್ತವಚತ್ತು ಲಂಘನಂ
ಗೆಯ್ವುದುಂ ಆದುದಾ ಮಧುಪಕೀರ ಪಿಕಾಳಿಗೆ ನಂದನಂಗಳೊಳ್

ಒಂದು ಹೂವಿನ ಮಕರಂದವನ್ನು ಕುಡಿಯಲಾಗದೆ ದುಂಬಿಗಳು ಬಳಸಿ ಸುತ್ತುತ್ತಿದ್ದವು. ಒಂದು ಹಣ್ಣಿನ ರಸವನ್ನು ಪೂರ್ತಿ ಹೀರಲಾಗದೆ ಗಿಳಿಗಳು ಕೊಕ್ಕು ತಿರುಗಿಸುತ್ತಿದ್ದವು. ಕೋಗಿಲೆಗಳು ಒಂದು ಮೊಗ್ಗನ್ನೂ ಸವಿಯಲಾರದೆ ಹಾರಿ ಹೋಗುತ್ತಿದ್ದವು ಎಂದು ಕನ್ನಡ ನಾಡಿನ ಸಸ್ಯ ಸಂಪತ್ತಿನ ಬಗ್ಗೆ ವರ್ಣನೆ ಮಾಡಿದ್ದಾನೆ.
ಕಮಲದಿಂದ ಕಮಲಕ್ಕೆ ಭ್ರಮರಗಳು ಹಾರುವುದನ್ನು ವರ್ಣಿಸುವಾಗ "ಪೋಲ್ತುದು ಮಧುವ್ರಂ ಮನೋಭವನುಳಿಯೊಳಾಡುವ ಪೊನ್ನ ಬಟ್ಟಲನೊರ್ಮೊದಲೆ ಮನೋಕಾಂತೆ ಮುಳಿಸಿಂ ದೆಸೆಗೋವದೆ ಸೂಸುವಂದಮಂ" ಎಂದು, ವಸಂತ ವರ್ಣನೆಯಲ್ಲಿ ಭ್ರಮರಗಳು "ಮದನಂ ಮಸಿಯೊಳ್ ಬರೆದಿಟ್ಟ ತನ್ನ ತಕ್ಕಿನ ಪೆಸರಕ್ಕರಂಗಳೆನಿಸಿರ್ದುವು" ಎನ್ನುತ್ತಾನೆ.
ಜಲಕ್ರೀಡೆಯ ಸಂದರ್ಭದಲ್ಲಿ ಅರಸ ಅರಸಿಯರ ಸರಸ ಸಲ್ಲಾಪವನ್ನು ಪೊನ್ನ

ವನಿತೆಯರಾ ರಾಜಕುಮಾ
ರನನುಯ್ದರ್ ದೀರ್ಘಕಾಂಬುಕೇಳಿಗೆ ಪಿಡಿಗಾಳ್
ವನಕರಿಯನುಯ್ವವೋಲ್ ನೂ
ತನ ಪುಷ್ಕರ ಹಸ್ತೆಯರ್ ಮಹೋಹರ ಗತಿಗಳ್

ವನ ಕರಿಯನ್ನು ಪಿಡಿಗಳು ಜಲಕೇಳಿಗೆ ಒಯ್ಯುವಂತೆ ಪುಷ್ಕರ ಹಸ್ತೆಯರಾದ ರಾಣಿಯರು ವಜ್ರಾಯುಧನನ್ನು ಸರೋವರಕ್ಕೊಯ್ದರು. ಅರಸನೊಡನೆ ನೀರಿಗಿಳಿಯುತ್ತಿದ್ದ ಅರಸಿಯರ ಪ್ರತಿಬಿಂಬ ಸರೋವರದಲ್ಲಿ ಮೂಡಿತ್ತು.

ವನರುಹಮೆಡ್ಡಮಪ್ಪ ಮೊಗಮಾದ ತಳಿರ್ತಳಮಾದ ಕೋಕಿಳ
ಧ್ವನಿಸರಮಾದ ಪಣ್ಣಡಕೆ ಬಾಯ್ದೆರೆಯಾದೆಳವಳ್ಳಿಯೇಳೆನೂ
ತನ ತನುವಾದ ಮಲ್ಲಿಗೆಯ ದುಂಬಿಯ ಕೂಟಮೆ ನೋಟಮಾದನಂ
ದನವನಲಕ್ಷ್ಮಿ ಕಣ್ಗೆಸೆದು ತನ್ನಗೆ ನೋಡಿಸಿದಳ್ ತಯಾರ್ಯರಿಂ

ತುಟಿಗಳನ್ನು ತೊಂಡೆಯ ಹಣ್ಣಿಗೆ ಹೋಲಿಸುವ ಸಾಧಾರಣ ಸಂಪ್ರದಾಯ ಕವಿಗಳಲ್ಲಿದೆ. ಪುಣ್ಣಡಕೆಯನ್ನು ಬಾಯ್ದೆರೆಗೆ ಹೋಲಿಸುವಲ್ಲಿ ಕವಿ ನಾವೀನ್ಯವನ್ನು ತಂದಿದ್ದಾನೆ. "ಮಲ್ಲಿಗೆಯ ದುಂಬಿಯ ಕೂಟಮೆ ನೋಟ"ವೆನ್ನುವಲ್ಲಿಯೂ ಕವಿ ಪೊನ್ನ ಹೊಸತನವನ್ನು ಸಾಧಿಸಿದ್ದಾನೆ. ಅಚ್ಚ ಬಿಳಿಯ ಮಲ್ಲಿಗೆಯ ನಟ್ಟನಡುವೆ ಕುಳಿತ ಕಪ್ಪು ದುಂಬಿಯ ದೃಶ್ಯ, ಕವಿಯ ದೃಷ್ಟಿಗೆ ಕಣ್ಣಿನಂತೆ ಕಂಡಿದೆ.
ದಿನ ನಿತ್ಯವೂ ಕಾಣುವ ದೃಶ್ಯ ಸಾಮಾನ್ಯರಿಗೆ ಸಾಮಾನ್ಯವಾಗಿಯೇ ಇರುತ್ತದೆ. ಆದರೆ ಕವಿಯ ದೃಷ್ಟಿಗೆ ಯಾವಾಗಲೂ ಒಂದು ವಿನೂತನತೆ ಎದ್ದು ತೋರುತ್ತದೆ. ಇಂತಹ ಸಂದರ್ಭ ಇಲ್ಲಿದೆ.

ನೆರೆಯೆ ಪಟಚ್ಚರದೊದವಿದ
ಸೆರಂಗಿನೊಳ್ ತಂದು ತೀವಿಪವನಂ ಹಿಮಮಂ
ಸೆರೆಯಿಟ್ಟಂತಿರೆ ಮೊಗದೊಳ್
ತುರುಗಿದ ಕಿರು ಬೆಮರದೇಂ ಮನಂಗೊಳಿಸಿದುದೊ

ಮೊಗದಲ್ಲಿ ಮೂಡಿದ ಬೆವರಿನ ಹನಿಗಳನ್ನು ಕವಿ ತನ್ನ ವಿಶೇಷ ವೈಖರಿಯಲ್ಲಿ ಬಣ್ಣಿಸಿದಾಗ ಪವನ ಸೆರೆಹಿಡಿದಿಟ್ಟ ಹಿಮಕಣಗಳಾದವು. ತಪಸ್ಸಿನಲ್ಲಿ ಮಗ್ನನಾದ ಋಷಿಯ ಚಿತ್ರವನ್ನು ಕವಿ ಹೀಗೆ ವರ್ಣಿಸಿದ್ದಾನೆ.

ಸತಿವಿಸುಟಳಲೊಳಮೆ ಲತಾ
ಕೃತಿಯಿಂದಡರ್ವಂತೆ ಮೈಯನಡರ್ದುವು ಪಲವುಂ
ವ್ರತತಿಗಳಪ್ಪಿದವೊಲಿಳಾ
ಸತಿಮೆಯ್ಯಂ ಪುತ್ತು ಪತ್ತಿ ಮೆತ್ತಿದುವೆನಿತುಂ

ದೀಕ್ಷೆ ಸ್ವೀಕರಿಸುವಾಗ ಹೆಣ್ಣನ್ನೂ, ಮಣ್ಣನ್ನೂ ತ್ಯಜಿಸಿದ ಮುನಿಯನ್ನು ಆ ಸತಿಯರು ಬಿಡಲು ಇಚ್ಚಿಸದೆ ಅವನ ಸಂಗವನ್ನೆ ಬಯಸುವರು. ಸತಿ ಲತೆಯಾಕಾರದಲ್ಲಿಯೂ ಇಳಾಸತಿ ಹುತ್ತದ

ರೂಪದಲ್ಲಿಯೂ ಮುನಿಯನ್ನು ಸುತ್ತುವರೆದಿರುತ್ತಾರೆ. ಅನಂತ ಕಾಲ ತಪಸ್ಸಿನಲ್ಲಿ ನಿರತನಾದ ಮುನಿಯ ಮೇಲೆ ಹಬ್ಬಿದ ಲತಾಪ್ರತಾನವೂ, ಹುತ್ತವೂ ಕವಿಯ ದೃಷ್ಟಿಗೆ ಕಂಡ ರೀತಿಯೇ ಬೇರೆ. ಅದನ್ನೇ ಬಣ್ಣಿಸಿದ ಕವಿ ಸಹಜ ವರ್ಣನೆಗೆ ವಿನೂತನವಾದ ಸೊಬಗನ್ನಿತ್ತಿದ್ದಾನೆ.

ನರಕದ ವರ್ಣನೆಯನ್ನು ಬಹು ಸುಂದರವಾಗಿ ಮೂಡಿಸಿದ್ದಾನೆ.
ನೆಲದೊಳ್ ಬಿಳ್ದಡಗಿಂಡೆಯಾಗೆ ನೆರನಂ ನಟ್ಟುರ್ಚಿದುಗ್ರಾಯುಧ
ಏಲಿಯಿಂದುರ್ವಿಸುವ ಇಂದ್ರ ಜಾಲಿಗನವೋಲ್ ಜೋಲ್ದುಂ ನೆರಲ್ದುಂ ಸಮಾ
ಕುಲಿತರ್ ಮೋಹಿಸಿ ಮುಚ್ಚೆವೋಗೆ ಪರಿತಂದುತ್ತಪ್ತಲೋಹ ದ್ರವಂ
ಜಲಮೆಂದಲ್ಲಿಯ ನಾರಕರ್ ತಳಿವುದುಂ ತಾತ್ಕಾಲಿಕರ್ ನಾರಕರ್

ಪಾಪ ಮಾಡಿದವನು ನೆಲದಲ್ಲಿ ನೆಟ್ಟಿರುವ ವಿಧ ವಿಧವಾದ ಆಯುಧಗಳ ಮೇಲೆ ಬೀಳುತ್ತಾನೆ. ಅವನ ದೇಹವೆಲ್ಲ ಮಾಂಸದ ಮುದ್ದೆಯಾಗುತ್ತದೆ. ಅವನ ದೇಹವು ಆಯುಧಗಳಿಗೆ ಚುಚ್ಚಿಕೊಂಡು ನೇತಾಡುತ್ತಿದ್ದುದು ಇಂದ್ರಜಾಲಿಗನು ನೇತಾಡುತ್ತಿರುವಂತೆ ಕಾಣುತ್ತಿತ್ತು. ನೆಲಕ್ಕೆ ಬಿದ್ದು ಮೂರ್ಛೆ ಹೋದವನನ್ನು ಯಮದೂತರು ಎತ್ತಿಕೊಂಡು ಕಾಯ್ದ ನೀರಾಗಿ ಹರಿಯುತ್ತಿದ್ದ ಲೋಹ ರಸಕ್ಕೆ ಹಾಕುತ್ತಿದ್ದರು. ಎಂದು ಶಿಕ್ಷೆಯ ಒಂದು ರೀತಿಯನ್ನು ವರ್ಣಿಸಿದರೆ

ಕರ್ಬಿನ ಗಾಣದೊಳ್ ಮರುಗುವಾಣದೊಳ್ ಎಣ್ಣೆಯ ಕುಂಡದೊಳ್ ಕನ
ಲ್ದರ್ವಿಸುವಚ್ಚಗೊಂಡದೊಳ್ ಆರ್ಗುವಿಸೆ ಸೀಳಿಸಿ ಮಾಣದಿಕ್ಕೆ ಪೋ
ಳ್ದಿರ್ವಗಿಮಾಡಿ ತಾಳಿಸೆ ಸುರುಳ್ವಿನೆಗಂ ನೆರೆ ಸಾಯನಂತಕಂ
ಚರ್ವಿತ ಚರ್ವಣಕ್ಕವನನೋವಿಂದನಾಗಳೆ ಸಾಯಲೀಗುಮೆ

ಕಬ್ಬಿನ ಗಾಣದಲ್ಲಿ, ಕುದಿಯುವ ಎಣ್ಣೆಯಲ್ಲಿ, ಕುದಿಯುವ ಪಾಕದಲ್ಲಿ, ಬೆಂಕಿಯ ಕುಂಡದಲ್ಲಿ ಹಾಕುತ್ತಿರಲು ಅವರ ದೇಹಗಳು ಸುರುಟಿಕೊಂಡು ಸಾಯಲಾರದೆ ಒದ್ದಾಡುತ್ತಿದ್ದವು ಎಂದೂ, ಅದೇ ರೀತಿ ಪರಸ್ತ್ರೀಯರನ್ನು ಕಾಮಿಸಿದವರನ್ನು
ಪರವಧುವನಲ್ಲದೆ ಅಂತಃ

ಪುರ ವಧುವಂ ಮೆಚ್ಚೆಯೆಂದು ತಂದಪ್ಪಿಸುವರ್
ಪರಿತಪ್ತ ಲೋಹಮಯ ಸುಂ
ದರಿಯಂ ಸುಂದರಿಯರಲ್ಲಿ ಮೊರೆಯಿಲ್ಲದವರೊಳ್

ನೀನು ಪರಸ್ತ್ರೀಯನಲ್ಲದೇ ನಿನ್ನ ಹೆಂಡತಿಯನ್ನು ಆಲಂಗಿಸುವುದಿಲ್ಲ ಅಲ್ಲವೇ? ಬಾ ಇದನ್ನು ತಬ್ಬಿಕೊ? ಎಂದು ಕಾದ ಕಬ್ಬಿಣದ ಸ್ತ್ರೀ ಪ್ರತಿಮೆಯನ್ನು ತಬ್ಬಿಸುತ್ತಿದ್ದರು. ಇದನ್ನು ಗಮನವಿಟ್ಟು ಓದಿದವರು ಸ್ವರ್ಗ–ನರಕಗಳಲ್ಲಿ ನಂಬಿಕೆ ಇರುವವರು ಯಾರುತಾನೆ ಪರಸ್ತ್ರೀ ಲೋಲರಾದರು? ಎಂದು ಸುಂದರವಾಗಿ ವರ್ಣಿಸುತ್ತಾನೆ. ಇದರಂತೆಯೇ ಇಹ ಜೀವನದ ಸುಖಕ್ಕಾಗಿ ಕಾತರದಿಂದ ಮಾಡುವ ತಪಸ್ಸಿನ ನಿರರ್ಥಕಥೆಯನ್ನು

ಶಿವಸುಖಮನರಿಯದೇ ಮಾ
ನವ ಸುಖದ ನಿಮಿತ್ತದಿಂ ತಪಂಗೆಯ್ವವರೊ
ಪ್ಪುವ ಮಾಣಿಕಮಂ ತೌಡಿಂ
ಗವಯವದಿಂ ಮಾರುಗುಡುವ ಮರುಳಂ ಪೋಲ್ಗುಂ

ಎಂದು ವರ್ಣಿಸುತ್ತಾನೆ. ಅಲ್ಲದೇ ಕಾವ್ಯದಲ್ಲಿ ಗದ್ಯಪದ್ಯಗಳ ಎರಡರಲ್ಲಿಯೂ ಗಾದೆ ಮತ್ತು ಸೂಕ್ತಿಗಳನ್ನು ಬಳಸುತ್ತಾನೆ. ಇದರಿಂದ ಕನ್ನಡದ ಸೊಗಸನ್ನು, ಮಧುರತೆಯನ್ನು ಹರಡುವುದರಲ್ಲಿ ಪೊನ್ನ ಯಶಸ್ವಿಯಾಗಿದ್ದಾನೆ. ‘‘ಮುನಿಗೆ ಕಿನಿಸುವೋದಿರೆಂಬ ನುಡಿಯೆನೆ ಪೋಲ್ತು’’, ‘‘ಗಾಣದೆಳ್ಳೋರೆಂದೆ ಬರ್ದುಂಕವವರಂತೆ’’, ‘‘ಗುರುವೆಂಬುದನೊಡನೆಂಬ ಶಿಷ್ಯಂ ಪೋಲ್ತು’’, ‘‘ಪುಟ್ಟರೆ ಕಯ್ವೋಗುಮೆ’’ ಮೊದಲಾದ ನಾಣ್ಣುಡಿಗಳ ಬಳಕೆ ಪೊನ್ನನ ಕನ್ನಡದ ಸಂಪತ್ತನ್ನು ಹೇಳುತ್ತದೆ. ಆದರೆ ಕಾವ್ಯದಲ್ಲಿ ಇಂಥ ಕನ್ನಡ ಸಂಪತ್ತನ್ನು ಯಶಸ್ವಿಯಾಗದೆ ಬಳಸಿಕೊಳ್ಳದೇ ಹೋದದ್ದು ವಿಪರ್ಯಾಸವೇ ಸರಿ. ಆದರೂ ಇಂತಹ ಹಲವು ಕಾವ್ಯಾಂಶಗಳು ಪೊನ್ನನಿಗೆ ‘ಕವಿಚಕ್ರವರ್ತಿ’ ಎಂಬ ಪಟ್ಟವನ್ನು ತಂದುಕೊಟ್ಟಿದೆ. ತನ್ನ ಕಾವ್ಯವನ್ನು ಪಂಡಿತರು, ಪಾಮರರು ಮೆಚ್ಚುತ್ತಾರೆ ಎಂದು ಪೊನ್ನ ಹೇಳಿಕೊಂಡಿದ್ದಾನೆ. ಇದನ್ನು ಕುರಿತು ರಂ.ಶ್ರೀ. ಮುಗುಳಿಯವರು ‘‘ಅವನ ಶಾಂತಿಪುರಾಣ ಶ್ರೇಷ್ಠಕೃತಿ ಎಂದು ಹೊಗಳುವವರು ಪಂಡಿತರಾದವರೂ ಇರಬೇಕು, ಮೂರ್ಖರಾದವರೂ ಇರಬೇಕು’’ ಎಂದು ಹೇಳಿರುವ ಮಾತು ಮನನೀಯವಾದುದು.

ಹೀಗೆ ಧರ್ಮ ಸಂಬಂಧಿಯಾದ ಅಂಶಗಳನ್ನು ಹೇಳುವಾಗಲೂ ಸಹ ಕಾವ್ಯದ ಮೂಲಕ, ಉಪಮೆಯಗಳ ಮೇಲೆ ಹೇಳಿದ ರೀತಿ ನಿಜಕ್ಕೂ ಕವಿಯ ಮನಸ್ಸಿನ ಕನ್ನಡಿಯಂತಿದೆ. ನೀರಸವೆನಿಸುವ ಧರ್ಮ ನಿರೂಪಣೆಯನ್ನು ಕವಿ ತನ್ನ ಕುಶಲ ಕಲೆಗಾರಿಕೆಯ ಮೆರಗು ಕೊಟ್ಟು ಸರವತ್ತಾಗಿ ತಂದಿದ್ದಾನೆ.

ಧರ್ಮ: ದಾನಚಿಂತಾಮಣಿ ಅತ್ತಿಮಬ್ಬೆ ತನ್ನ ಪಿತೃ ಭಕ್ತಿಯನ್ನು ಮೆರೆಯುವುದಕ್ಕಾಗಿ ಈ ಪುರಾಣ ಚೂಡಾಮಣಿಯ ಸಹಸ್ರ ಪ್ರತಿಗಳನ್ನು ಬರೆಯಿಸಿದಂತೆ ಕಂಡುಬರುತ್ತದೆ.ಇಂತಹ ಧರ್ಮ ಗ್ರಂಥಗಳ ಪ್ರಸರಣದಿಂದ ಅಂದಿನ ಕಾಲಕ್ಕೆ ಅನನ್ಯ ಭಕ್ತಿ ಮತ್ತು ಶ್ರದ್ಧೆಗಳನ್ನು ಜನರು ತೋರಿಸುತ್ತಿದ್ದಂತೆ ಭಾವಿಸಬಹುದು. ಶಾಂತಿಪುರಾಣಕ್ಕೆ ಪರ್ಯಾಯವಾಗಿ ‘ಪುರಾಣ ಚೂಡಾಮಣಿ’ಯೆಂದು ಕರೆಯಲಾಗುತ್ತಿತ್ತು. ಈ ಪರ್ಯಾಯ

ನಾಮವೇ ಹೆಚ್ಚು ಪ್ರಚಲಿತವಾಗಿದ್ದಂತೆ ಕಂಡುಬರುತ್ತದೆ. ಪೊನ್ನನಿಗೂ ಶಾಂತಿಪುರಾಣ ಎಂಬ ಹೆಸರಿಗಿಂತಲೂ ಪುರಾಣ ಚೂಡಾಮಣಿಯೇ ಅತ್ಯಂತ ಪ್ರಿಯವೆಂಬಂತೆ ಗೋಚರಿಸುತ್ತದೆ. ಈ ಕಾವ್ಯದ ಆಶ್ವಾಸದ ಕೊನೆಗೆ ಮತ್ತು ಗದ್ಯಗಳಲ್ಲೂ ಪುರಾಣ ಚೂಡಾಮಣಿ ಎಂದೇ ಮತ್ತೆ ಮತ್ತೆ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ.

ಕಾಂತ ಜಿನಾಂತರದೊಳ್ ಸಲೆಪ
ಶಾಂತಿ ಪುರಾಣಮೆ ಪುರಾಣ ಚೂಡಾಮಣಿಯೆಂ
ದಿಂತು ಪೆಸರಿಡುಗುಮೇ ಮತಿ
ವಂಶಂ ಕವಿಚಕ್ರವರ್ತಿ ಸಮೆದೀ ಕೃತಿಯಂ

ಧರ್ಮ ಮತ್ತು ಕಾವ್ಯಧರ್ಮ ಪರಸ್ಪರ ವಿರೋಧಿಗಳಲ್ಲ "ಧರ್ಮವು ಅಗತ್ಯವಾಗಿ ಕಾವ್ಯದ ತಿರುಳಾಗಬಹುದು, ರಸವುಕ್ಕುವಂತೆ ಅದನ್ನು ನಿರೂಪಿಸಲೂಬಹುದು ಆದರೆ ಎಷ್ಟೇ ವೇಳೆ ಧರ್ಮದ ಹೆಸರಿನಲ್ಲಿ ವ್ಯಾಖ್ಯಾನಗಳು, ಮತ ವಿಚಾರಗಳು ತಲೆಹಾಕಿ ಕಾವ್ಯರಸವನ್ನು ಬತ್ತಿಸುತ್ತವೆ" ಎಂಬ ತೀ.ನಂ.ಶ್ರೀ. ಯವರ ಮಾತು ಬಹುಮಟ್ಟಿಗೆ ಸತ್ಯವೆಂಬುದು ಪೊನ್ನನ ಶಾಂತಿಪುರಾಣವನ್ನು ಅವಲೋಕನ ಮಾಡಿದಾಗ ನಿಜವೆನ್ನಬಹುದು. ಜೈನಪುರಾಣಗಳಲ್ಲಿ ಕಾವ್ಯದ ಅಂಶಗಳಿಗಿಂತಲೂ ಭವಾವಳಿಗಳಿಗಿರುವ ಮುಖ್ಯತೆಯನ್ನು, ಜೈನ ಧರ್ಮದ ಸಾರವನ್ನು ಪ್ರತಿಪಾದಿಸುವುದೇ ಪೊನ್ನನ ಉದ್ದೇಶವಾಗಿರಬೇಕು.

ಪದದಪ್ಪದೆಯುಂ ಬಗೆ ಬೆದ
ರದೆಯುಂ ಕತೆಕಿಡದೆಯುಂ ಭವಾವಳಿ ತಡ ಮಾ
ಗದೆಯುಂ ಸವಿ ತವದೆಯುಮಂ
ಬುದನಿನದನತಂದ್ರನಿಂದನಾ ಜಿನಚಂದ್ರಂ

ಎನ್ನುವಲ್ಲಿ ಪೊನ್ನನ ಆದರ್ಶ, ದಾರ್ಶನಿಕ ವ್ಯಕ್ತಿತ್ವ ಕಣ್ಣ ಮುಂದೆ ಬರುತ್ತದೆ. ಪೊನ್ನನ ಮನಸ್ಸು ಮೊದಲು ಧರ್ಮ ನಂತರ ಕಾವ್ಯವೆಂಬುದು ಪೊನ್ನನ ಕೃತಿಯ ಅವಲೋಕನದಿಂದ ತಿಳಿಯಬಹುದು.

ಜೈನಧರ್ಮದಲ್ಲಿ ಲೋಕಾಕಾರದ ಬಗೆಗೆ ಅತಿಸೂಕ್ಷ್ಮ ವಿವೇಚನೆಯಿದೆ. ಆ ಲೋಕದ ಆಕಾರ 'ಕಟಿತಟವಿನ್ಯಾಸ್ತ ಹಸ್ತ ನಟನಾಕೃತಿ' ಯಂತಿದೆ. ಇದನ್ನ ೩ ಮಹಾನಿಲಗಳು ಲೋಕವನ್ನು ಸುತ್ತುವರಿದಿವೆ. ಲೋಕವನ್ನು ಸ್ಥೂಲವಾಗಿ ಊರ್ಧ್ವ, ಮಧ್ಯ ಮತ್ತು ಅಧೋ ಲೋಕ ಎಂದು ೩ ಭಾಗಗಳಾಗಿ ವಿಂಗಡಿಸಲಾಗಿದೆ. ಪೊನ್ನನು ಊರ್ಧ್ವ ಲೋಕವನ್ನು ವರ್ಣಿಸಿ ೮ ಸ್ವರ್ಗಗಳನ್ನು ಹೇಳುತ್ತಾನೆ. ಒಂದೊಂದು ಸ್ವರ್ಗದಲ್ಲಿಯೂ ಎರಡು ಕಲ್ಪಗಳಿದ್ದು, ಒಟ್ಟು ೧೬ ಕಲ್ಪಗಳ ಕಲ್ಪನೆ ಜೈನರಲ್ಲಿದೆ. ಕೆಲವು ಕಲ್ಪಗಳನ್ನು ಕಥೆಯ ನಡುನಡುವೆ ವರ್ಣಿಸಿದ್ದಾನೆ.

ನಾಕ ತ್ರಿಷಷ್ಟಿ ಪಟಲಾ
ನೀಕಂ ಗ್ರೈವೇಯಕಂಗಳೊಂಬತ್ತೊಂಬ
ತ್ತಾಕಡೆವರೆ ವನುದಿಶೆಗಳ್
ಲೋಕೋ ಪರಿಮಂಗಳಯ್ದಣೂತ್ತರೆಯಕ್ಕ

ಸ್ವರ್ಗದಲ್ಲಿ ೬೩ ಪಟಲಗಳಿರುವ ವಿಷಯವನ್ನು ಪೊನ್ನ ಹೇಳುತ್ತಾನೆ. ಸ್ವರ್ಗ ಕಲ್ಪಗಳ ಮೇಲೆ ಒಂಬತ್ತು ಗ್ರೈವೇಯಕಗಳೂ, ಒಂಬತ್ತು ಅನುದಿಶವಿಮಾನಗಳೂ ಇವೆ. ಅದನ್ನು ದಾಟಿ ಮೇಲೇರಿದರೆ ಪಾಂಚಾಣೂತ್ತರ ವಿಮಾನದ ನಾಭಿಯಂತಿರುವ ಸರ್ವಾರ್ಥ ಸಿದ್ಧಿ ವಿಮಾನವಿದೆ. ಅಲ್ಲಿಂದ ಸ್ವಲ್ಪ ಮೇಲಿರುವ ಸಿದ್ಧಶಿಲೆಯಲ್ಲಿ ಅನಂತ ಸುಖ ಪುರುಷರಾದ ಸಿದ್ಧರು ನೆಲಸಿರುತ್ತಾನೆ.

ಜೀವ ಪರಮಾತ್ಮನಾಗುವ ಸಾಧನೆಯಲ್ಲಿ ಹಲವು ಭವಗಳಲ್ಲಿ ತೊಳಲಾಡುತ್ತಾ, ಫಲ ಪುಣ್ಯಗಳ ಫಲದ ಅನುಸಾರವಾಗಿ ವಿವಿಧ ಗತಿಗಳಲ್ಲಿ ಜನ್ಮತಾಳುತ್ತದೆ. ಪುಣ್ಯ ಕರ್ಮ ಮಾಡಿದ ಜೀವ ಸ್ವರ್ಗ ಲೋಕದಲ್ಲಿ ಜನಿಸಿ ಬಗೆ ಬಗೆಯ ಸುಖಭೋಗಗಳನ್ನು ಅನುಭವಿಸುತ್ತದೆ. ರೂಪು, ಯೌವನ, ಐಶ್ವರ್ಯ ಭೋಗಗಳೆಲ್ಲ ಸ್ವರ್ಗದಲ್ಲಿ ಲಭಿಸುತ್ತದೆ. ಈ ಸ್ವರ್ಗ ಪ್ರಾಪ್ತಿಗೆ ಮಾನವ ಮರ್ತ್ಯಲೋಕದಲ್ಲಿ ಸತ್ಕಾರ್ಯ ಮಾಡಬೇಕು. ಸ್ವರ್ಗದ ಆಕರ್ಷಣೆಗೊಳಗಾಗಿಯಾದರೂ ಪಾಪದಿಂದ ದೂರನಾಗಿ ಪೂರ್ಣಕಾರ್ಯಲ್ಲಿ ತೊಡಗುತ್ತಾನೆ. ಆದುದ್ದರಿಂದಲೇ ಜೈನರ ಕಲ್ಪನೆಯಲ್ಲಿ ಸ್ವರ್ಗದ ವರ್ಣನೆ ಅತ್ಯಂತ ಸುಂದರವಾಗಿ ಭೋಗಮಯವಾಗಿ ಚಿತ್ರಿತವಾಗಿದೆ. ನರಕದ ಕಲ್ಪನೆಯಿಂದ ಮೈನಡುಗುವಂತೆ ಸ್ವರ್ಗದ ಕಲ್ಪನೆಯಿಂದ ರೋಮಾಂಚನವಾಗುತ್ತದೆ.

ಭವಾವಳಿಗಳ ಸರಮಾಲೆಯನ್ನು ಹೆಣೆದು ಜನ ಸಾಮಾನ್ಯರನ್ನು ಧರ್ಮಮಾರ್ಗದೆಡೆಗೆ ತಿರುಗಿಸುವುದೇ ಜೈನ ಪುರಾಣಗಳ ಉದ್ದೇಶ. ಆದ್ದರಿಂದ ಪೊನ್ನನು ಜಿನ ಮುನಿಗಳು, ಸಿದ್ಧರು, ಆಚಾರ್ಯರೊಂದಿಗೆ ಯೋಗಿಗಳು ಮತ್ತು ಯಕ್ಷಿಯರನ್ನು ವಂದಿಸುವ ಮೂಲಕ ಕಾವ್ಯವನ್ನು ಆರಂಭಿಸುತ್ತಾನೆ. ಆದರೆ ಭವಾವಳಿಯನ್ನು ಅನುಕ್ರಮವಾಗಿ ಹೇಳದೆ ಆರನೆಯ ಭವದ ಅಪರಾಜಿತನಿಂದ ಆರಂಭಿಸಿ ತನ್ನ ಹಿಂದಿನ ಜನ್ಮಗಳಾದ ಅಚ್ಯುತೇಂದ್ರ, ಅಮಿತತೇಜ, ಮಣಿಚೂಳರ ವೃತ್ತಾಂತವನ್ನು ಶಾಂತಿನಾಥ ಹೇಳಿದರೆ; ಉಳಿದ ಮೂರು ಭವಗಳಾದ ಶ್ರೀಷೇಣ, ಭೋಗಭೂಮಿಜ ಹಾಗೂ ಶ್ರೀದೇವರ ವೃತ್ತಾಂತಗಳನ್ನು ವಿಜಯ ಕೇವಲಿಗಳು ಹೇಳುತ್ತಾರೆ.

ಯಾವುದೇ ಜೀವವು ತನ್ನ ಸತತ ಪರಿಶ್ರಮದಿಂದ ಅತ್ಯುನ್ನತ ಪದವಿಗೇರಬಹುದು ಎಂಬ ಜೈನ ತತ್ವವು ಶಾಂತಿಪುರಾಣದಲ್ಲಿ ಮೂಡಿಬಂದಿದೆ. ಭವಾವಳಿಯ ಪ್ರತಿಯೊಂದು ಘಟ್ಟದಲ್ಲಿಯೂ ಜೀವಿಯ ಮನಸ್ಸು ಮಾಗುವಕ್ರಿಯೆಯನ್ನು ಬಿಚ್ಚಿಡುವ ತಂತ್ರವನ್ನು ಪೊನ್ನ ಯಶಸ್ವಿಯಾಗು ನಿರ್ವಹಿಸಿದ್ದಾನೆ. ತಂದೆಯನ್ನು ಕಳೆದುಕೊಂಡಿದ್ದ ಕನಕಶ್ರೀಗೆ ಅನಂತವೀರ್ಯ; ಅವಳ ಅಣ್ಣಂದಿರನ್ನು ಕೊಲ್ಲುವ ಮೂಲಕ ಹೊಸ ದು:ಖ ತಂದುಕೊಟ್ಟ. ತಂದೆ, ಅಣ್ಣಂದಿರು ತನ್ನ ಕಾರಣಕ್ಕಾಗಿ ಸತ್ತರೆಂಬನೋವಿನಿಂದ ಕನಕಶ್ರೀ

“ಕುಲಾಪವಾದವಾಗೆಯುಮೆನಗಿನ್ನೇ ದೊರೆ ವಿವಾಹಮಯಸದೊಳಾದೀ ಕರೆಕರ್ಚೆಪೋಗದೀ ಕೆಯ್ನೀರೊಳ್” ಎಂದು ತೀರ್ಮಾನಿಸಿ ರಾಜನ ಆಸ್ಥಾನಕ್ಕೆ ಬಂದು

ಜನಕವಧಜಾತ ಶೋಕಂ
ಮನದೊಳ್ ಸಂಸ್ಕೃತಿ ಲತಾ ಪ್ರತಾನದುಸುರ್ವಂ
ಜನಯಿಪುದಾನಾವಳೊಳಂ
ಗನೆ ಗಡ ಷೋಡಶ ಸಹಸ್ರಮಂತ: ಪುರದೊಳ್

ಎಂದು ಕನಕಶ್ರೀ ಹೇಳಿದಾಗ; ಯಾವಳಿಗೋಸ್ಕರ ಅಷ್ಟೊಂದು ದೊಡ್ಡ ಯುದ್ಧ ಮಾಡಿ, ಲಕ್ಷಾಂತರ ಜೀವಗಳನ್ನು ತೆಗೆದು, ಮದುವೆಯಾಗಲು ‘ತಂದ ಅವಳೇ ತಂದೆ ಸತ್ತ ದು:ಖ ತುಂಬಿರುವ ಮನಸ್ಸಿನಲ್ಲಿ ಸಂಸಾರಲತೆ ಹಬ್ಬದು’ ಎಂದು ನಿರಾಕರಿಸಿದಾಗ ಎಂತಹವನ ಮನಸ್ಸು ಜ್ಞಾನೋದಯವಾಗುವುದರಲ್ಲಿ ಸಂಶಯವಿಲ್ಲ. ಹೀಗೆ ದಮಿತಾರಿಯೊಡನೆ ಯುದ್ಧ ಮಾಡಿ ಗೆದ್ದ ಅನಂತವೀರ್ಯ, ದಮಿತಾರಿಯ ಮಗಳು ಕನಕಶ್ರೀಯನ್ನು ಮದುವೆಯಾಗಲು ಸಾಧ್ಯವಾಗುವುದಿಲ್ಲ. ಅವಳು ಜೀವದೀಕ್ಷೆಯನ್ನು ಪಡೆದು ಹೊರಟು ಹೊದ ಮೇಲೆ ಅವನು ಇನ್ನೊಂದು ಮದುವೆಯಾಗಿ ಸುಮತಿಯೆಂಬ ಮಗಳನ್ನು ಪಡೆಯುತ್ತಾನೆ. ಸುಮತಿಯ ಸ್ವಯಂವರ ನಡೆದಾಗ ಪೂರ್ವ ಜನ್ಮದಲ್ಲಿಯ ಅವಳ ಅಕ್ಕ ಅನಂತಶ್ರೀ ಅವಳನ್ನು ಎಚ್ಚರಿಸಿದ್ದರಿಂದ ಸುಮತಿ ಸ್ವಯಂವರವನ್ನು ತ್ಯಜಿಸಿ ಜೀವ ದೀಕ್ಷೆ ಪಡೆದು ಹೊರಟುಹೋಗುತ್ತಾಳೆ. ಹೀಗೆ ಜೈನಧರ್ಮದ ದರ್ಶನವಾಗುವುದು. ಕನಕಶ್ರೀ ಆಗಿರಲಿ, ಅನಂತವೀರ್ಯನ ಮಗಳು ಸುಮತಿಯೇ ಆಗಿರಲಿ ಅವರ ಜೀವನ ವಿಕಾಸಕ್ರಮ ಮುನ್ನಡೆದಿರುವ ಜೀವಗಳಿಗೆ ವೈರಾಗ್ಯ ಯಾವಾಗ ಬರುವದೋ ಹೇಳಲು ಬಾರದು. ಲೋಕದ ನಿಯಮವನ್ನು ಮೀರಿದ ಜೀವ ತನ್ನ ಮೋಕ್ಷವನ್ನು ಕಾಣಲೇಬೇಕು ಎಂಬುದು ಪುರಾಣದ ಉದ್ದಕ್ಕೂ ತಮ್ಮ ಭನಾವಳಿಯ ಮೂಲಕ ಕಂಡು ಬರುವದು.

ಶಾಂತಿ ಜಿನೇಶ್ವರನ ಪರಿನಿಷ್ಕ್ರಮಣ ಕಾಲದಲ್ಲಿ ಅವನು

“ಧರೆ ಶಾಶ್ವತಮಲ್ಲಷ್ಟಮ
ಧರೆ ಶಾಶ್ವತಮವನಿಚಕ್ರ ವಿಕ್ರಮಚಕ್ರಂ
ದೊರೆಯಲ್ಲು ಧರ್ಮಚಕ್ರಂ
ದೊರೆಯಕ್ಕುಂ ಭವ್ಯವಿನಮದ ಪ್ರತಿಬದ್ಧಂ
ಸ್ತ್ರೀರತ್ನದೆಡೆಗೆ ಮುಕ್ತಿ
ಸ್ತ್ರೀರತ್ನಂ ಸಭೆಗೆ ದೇವ ಮಾನವ ಸಭೆ ಸಂ
ಭೀರೋಕ್ತಿಗೆ ದಿವ್ಯ ಧ್ವನಿ
ಸಾರಮವಂ ಬಿಸುವನಪ್ಪೊಡುರುಮಾರಲ್ತೆ”

ಇಲ್ಲಿ ಭಾಷೆಯ ಸಂದಿಗ್ಧತೆಯನ್ನು ಪೊನ್ನ ಸರಿಯಾಗಿ ನಿರ್ವಹಿಸಿದ್ದಾನೆ. ಮೋಕ್ಷ, ಅಷ್ಟ ಮಧುರೆ, ಧರ್ಮಚಕ್ರವಾಗುವುದು ಭಾಷೆಯ ಅವಶ್ಯಕತೆಯಾಗಿದೆ. ಅದರಂತೆಯೇ ಮುಕ್ತಿ ಸ್ತ್ರೀರತ್ನವಾಗುತ್ತದೆ. ಮೋಕ್ಷ ಹೆಣ್ಣಾಗುವುದು ಭಾಷೆಯಲ್ಲಿ ಮಾತ್ರ. ಗಂಭೀರವಾದ ಉಕ್ತಿಯನ್ನು ಬಿಟ್ಟು ದಿವ್ಯ ಧ್ವನಿಯನ್ನು ಆಶ್ರಯಿಸಬೇಕೆ? ಈನ ದೃಷ್ಟಿಯಿಂದ ನೋಡಿದಾಗ ಅದೇ ಅನಿವಾರ್ಯವಾಗಬಹುದು. ಯಾವುದು ಧ್ರುವ ಯಾವುದು ಅಧ್ರುವವೆಂಬುದರ ಸ್ಪಷ್ಟ ಕಲ್ಪನೆ ಇದ್ದುದ್ದರಿಂದಲೇ ಕಾವ್ಯಂಶಕ್ಕಿಂತ ಜಿನತತ್ವಗಳಿಗೆ ಹೆಚ್ಚಿನ ಮನ್ನಣೆ ಪೊನ್ನ ಕೊಟ್ಟಿರುವುದು ಸ್ಪಷ್ಟವಾಗಿ ಶಾಂತಿಪುರಾಣದಲ್ಲಿದೆ.

ಶಾಂತಿ ಪುರಾಣದಲ್ಲಿ ಜನ್ಮಾಂತರದ ಭನಾವಳಿಯ ದೀರ್ಘಪಥವನ್ನು ದಾಟಿಹೋಗುವ ಕಥೆ ಇದೆ. ಇದರ ಜೊತೆ ಸ್ವಯಂವರ, ಬೇಟೆ, ಜಲಕೇಳಿ, ಸೂಳೆಗೇರಿಯ ರಮ್ಯ ಪ್ರಸಂಗಗಳು, ಯುದ್ಧ ಧೂತಕಾರ್ಯ ದ್ರೋಹ ಮೊದಲಾದ ಪ್ರಸಂಗಗಳಿವೆ; ವರ್ಣನೆಗಳಿವೆ. ಇವೆಲ್ಲ ಕಾವ್ಯದ ಕರ್ತವ್ಯಗಳಾಗಿರುವುದರಿಂದ ಪೊನ್ನನು ವಿಪುಲವಾಗಿ ಬಳಸಿದರೂ ಅವನು ಕಾವ್ಯ ಧರ್ಮವನ್ನು ಯಶಸ್ವಿಯಾಗಿ ತರುವಲ್ಲಿ ಕಷ್ಟಸಾಧ್ಯವಾಗಿದೆ. ಕತೆಯಾಗಲಿ, ಸನ್ನಿವೇಶ ರಚನೆಯಾಗಲಿ, ವರ್ಣನೆಗಳಾಗಲಿ ಅಲಂಕಾರಗಳಾಗಲಿ ಅವೆಲ್ಲ ಕಾವ್ಯದ ರಸಾಂಶಗಳನ್ನು ಸೃಷ್ಟಿ ಮಾಡದೆ ಅವೆಲ್ಲವುಗಳ ಗುರಿ ಅರ್ಥ ಒಂದೇ ಆಗಿದೆ. ಅದು ಜೈನಧರ್ಮದ ಅರ್ಥವನ್ನು ಹೇಳುವುದಾಗಿದೆ. ಪೊನ್ನ ತನ್ನ ಶಾಂತಿಪುರಾಣವನ್ನು ರಚಿಸಿ ‘ಜಿನಸಮಯದೀಪಕ’ನಾಗಿ ಕಂಗೊಳಿಸಿದನು. ಅಲ್ಲದೇ ತನ್ನ ಕಾಲದ ಪಂಡಿತರನ್ನು ಮೆಚ್ಚಿಸಲೆಂದು ಕಾವ್ಯ ಬರೆದನು. ಈ ಕಾರ್ಯದಲ್ಲಿಯೂ ಆತ ಯಶಸ್ವಿ ಆಗಿದ್ದಾನೆ.

## ಗ್ರಂಥ ಪರಾಮರ್ಶೆ


೧. ಕನ್ನಡ ಸಾಹಿತ್ಯ ಸಂಗಾತಿ – ಕೀರ್ತಿನಾಥ ಕುರ್ತಕೋಟಿ
೨. ಕನ್ನಡ ಸಾಹಿತ್ಯ ಸಮೀಕ್ಷೆ – ಜಿ ಎಸ್ ಶಿವರುದ್ರಪ್ಪ
೩. ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ ೧ – ಸಿ. ವೀರಣ್ಣ
೪. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ – ಎಚ್. ನಂಜೇಗೌಡ
೫. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ – ೨– ಪ್ರ. ಸಂ.
೬. ಜಿ ಎಸ್ ಶಿವರುದ್ರಪ್ಪ
೭. ಕನ್ನಡ ಸಾಹಿತ್ಯ ಚರಿತ್ರೆ – ರಂ ಶ್ರೀ ಮುಗಳಿ